# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿ ಇವರ ನಡುವಳಿಕೆಗಳು, ಹಾವೇರಿ

**ವಿಷಯಃ** ಹಾವೇರಿ ಜಿಲ್ಲಾ ನ್ಯಾಯಾಂಗ ಇಲಾಖೆಯ ತಾತ್ಕಾಲಿಕ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸುವ ಕುರಿತು.

**ಓದಲಾಗಿದೆಃ**

1. ಗೌರವಾನ್ವಿತ ಭಾರತದ ಸರ್ವೋಚ್ಛ ನ್ಯಾಯಾಲಯ, ದೆಹಲಿ ಇವರ Civil Appeal No. 2368/2011, ದಿನಾಂಕಃ 09-02-2017
2. ಸರ್ಕಾರಿ ಆದೇಶ ಸಂಖ್ಯೆಃ DPAR 182 SRR 2011, ದಿನಾಂಕಃ 06-05-2017 ಮತ್ತು ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆಃ LCA-I. 147/2017, ದಿನಾಂಕಃ 30.06.2017.
3. ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ ಇವರ ಪತ್ರ ಸಂಖ್ಯೆ ಎಡಿಎಂ/1151/2017 ದಿನಾಂಕ 5-8-2017.
4. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ ಎಲ್.ಸಿ.ಎ-2 118/2017 ದಿನಾಂಕ 3-11-2017.
5. ಈ ನ್ಯಾಯಾಲಯದ ಪತ್ರ ಸಂಖ್ಯೆ 2767/2017, ದಿನಾಂಕಃ 03-11-2017.
6. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ಇವರ ಇ-ಮೇಲ್ ದಿನಾಂಕ 20-11-2017.
7. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ ಎಲ್.ಸಿ.ಎ-2 118/2017 ದಿನಾಂಕ 29-11-2017.
8. ಕಚೇರಿ ಟಿಪ್ಪಣಿ ದಿನಾಂಕ 29-11-2017 ಹಾಗೂ ಅದರ ಮೇಲಾದ ಆದೇಶ.

******

**ಪ್ರಸ್ತಾವನೆಃ**

ಮೇಲೆ ಓದಲಾದ ಕ್ರಮ ಸಂಖ್ಯೆ 1 ಹಾಗೂ 2 ರ ಪ್ರಕಾರ ದಿನಾಂಕ 12-10-2001 ರಿಂದ 30-9-2017 ರವರೆಗೆ ಶಿರಸ್ತೇದಾರ, ಶೀಘ್ರಲಿಪಿಗಾರರು, ಪ್ರ.ದ.ಸ., ದ್ವಿ.ದ.ಸ, ಬೆರಳಚ್ಚುಗಾರರು, ಬೆರಳಚ್ಚು-ನಕಲುಗಾರರು, ಬೆಲೀಫ, ವಾಹನ ಚಾಲಕರು, ಜಾರಿಕಾರರು, ಅಟೆಂಡರ್ ಹಾಗೂ ಸಿಪಾಯಿ ಇವರ ಪರಿಷ್ಕೃತ ಸೇವಾ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಅಂತರ್ಜಾಲದಲ್ಲಿ ಪ್ರಕಟಿಸಿ ಈ ಜೇಷ್ಠತಾ ಪಟ್ಟಿಗೆ ದಿನಾಂಕ 17-11-2017 ರ ಒಳಗಾಗಿ ಆಧಾರ ಸಹಿತ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು, ಕೆಲವೊಂದು ಆಕ್ಷೇಪಣೆಗಳು ಈ ನ್ಯಾಯಾಲಯದಲ್ಲಿ ಸ್ವೀಕೃತವಾಗಿದ್ದು, ಅವುಗಳಿಗೆ ಉತ್ತರ ನೀಡಿ ಕ್ರಮ ಸಂಖ್ಯೆ 7 ರ ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಇವರ ಮಾರ್ಗದರ್ಶನದಂತೆ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿ ಜಿಲ್ಲಾ ನ್ಯಾಯಾಲಯದ ಅಂತರ್ಜಾಲದಲ್ಲಿ ಪ್ರಕಟಿಸಲು ಈ ಕೆಳಕಂಡ ಆದೇಶ;

## ಆದೇಶ ಸಂಖ್ಯೆಃ 205/2017
## ದಿನಾಂಕ: 29ನೇ ನವೆಂಬರ್ 2017.

ಹಾವೇರಿ ಜಿಲ್ಲಾ ಘಟಕದ ಸಿಬ್ಬಂದಿಗಳ ತಯಾರಿಸಿದ ಪರಿಷ್ಕೃತ ಜೇಷ್ಠತಾ ಪಟ್ಟಿಗೆ ಸ್ವೀಕರಿಸಿದ ಆಕ್ಷೇಪಣೆಗಳಿಗೆ ಈ ಕೆಳಗಿನಂತೆ ಉತ್ತರ ನೀಡಲಾಗಿದೆ

1. ಶ್ರೀ ವಾಯ್. ಪಿ. ಪಾಟೀಲ, ಶಿರಸ್ತೇದಾರರು, ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಸವಣೂರ ಇವರ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡಂತೆ ಉತ್ತರಿಸಲಾಗಿದೆ

ಶ್ರೀ ಪಿ. ಎಂ. ಮೊಗವೀರ, ಶ್ರೀ ಎಂ. ಎಚ್. ಕಡಕೋಳ ಮತ್ತು ಶ್ರೀ ಬಿ. ಶ್ರೀನಿವಾಸ ಇವರು ಕರ್ನಾಟಕ ಲೋಕಸೇವಾ ಆಯೋಗದಿಂದ ಪ್ರ.ದ.ಸ ಅಂತಾ ಆಯ್ಕೆಗೊಂಡು ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ ಇವರ ಆದೇಶ ಸಂಖ್ಯೆ 125/99 ದಿನಾಂಕ 4-8-1999 ರ ಪ್ರಕಾರ ಕ್ರಮವಾಗಿ ದಿನಾಂಕ 17-08-1999, 17-8-1999 ಮತ್ತು 12-8-1999 ರಂದು ಈಗಿನ ಹಾವೇರಿ ಜಿಲ್ಲೆಯ ಹಿರೇಕೆರೂರ, ಬ್ಯಾಡಗಿ ಹಾಗೂ ರಾಣೇಬೆನ್ನೂರ ನ್ಯಾಯಾಲಯಕ್ಕೆ ಪ್ರ.ದ.ಸ ಅಂತಾ ಹಾಜರಾಗಿರುತ್ತಾರೆ.

ಶ್ರೀ ಪಿ. ಎಂ. ಮೊಗವೀರ, ಶ್ರೀ ಎಂ. ಎಚ್. ಕಡಕೋಳ ಮತ್ತು ಶ್ರೀ ಬಿ. ಶ್ರೀನಿವಾಸ ಇವರು ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ಹಾವೇರಿ ಜಿಲ್ಲೆಯು ಅಖಂಡ ಧಾರವಾಡ ಜಿಲ್ಲೆಗೆ ಒಳಪಟ್ಟಿರುತ್ತದೆ. ನಂತರ ಇದು ದಿನಾಂಕ 12-10-2001 ರಂದು ಹಾವೇರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಪ್ರಾರಂಭವಾಗಿರುವುದರಿಂದ ಈ 3 ಸಿಬ್ಬಂದಿಗಳು ಹಾವೇರಿ ಜಿಲ್ಲೆಯಲ್ಲಿಯೇ ಉಳಿದು ಸೇವೆ ಸಲ್ಲಿಸುತ್ತಿದ್ದಾರೆ.

ಆದರೆ ಕರ್ನಾಟಕ ಲೋಕಸೇವಾ ಆಯೋಗದವರ ಪತ್ರ ಸಂಖ್ಯೆ ಫ.ಸಾ(2) 537/04-05 ದಿನಾಂಕಃ 12-1-2005 ರ ಪ್ರಕಾರ ಇವರುಗಳು ಗ್ರಾಮೀಣ ಕೃಪಾಂಕವನ್ನು ಹೊರತುಪಡಿಸಿಯು ಪ್ರ.ದ.ಸ ಹುದ್ದೆಗೆ ಆಯ್ಕೆಯಾಗಿ ಇದೇ ಇಲಾಖೆಯಲ್ಲಿಯೇ ಸೇವೆಯಲ್ಲಿ ಮುಂದುವರೆದಿರುತ್ತಾರೆ.

ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಗ್ರಾಮೀಣ ಕೃಪಾಂಕವನ್ನು ರದ್ದುಪಡಿಸಿ ಆದೇಶಿಸಿದಾಗ ಗ್ರಾಮೀಣ ಕೃಪಾಂಕವನ್ನು ಹೊರತುಪಡಿಸಿ ಅವರು ಗಳಿಸಿದ ಅಂಕಗಳ ಮೆರಿಟ್ ಆಧಾರದ ಮೇಲೆ ಸದರಿ ಅಭ್ಯರ್ಥಿಗಳು ಪ್ರ.ದ.ಸ.ರಾಗಿ ಮೂಲ ಆಯ್ಕೆ

ಪಟ್ಟಿಯಲ್ಲಿಯೇ ಮುಂದುವರೆಯುತ್ತಾರೆ (After excluding rural weightage – retained as meritorious candidates). ಅಲ್ಲದೇ ಗ್ರಾಮೀಣ ಕ್ರಪಾಂಕದ ವಿಷಯಕ್ಕೆ ಸಂಬಂಧಿಸಿದಂತೆ ರಿಟ್ ಅರ್ಜಿ ಸಂಖ್ಯೆ 560/2002 ಮತ್ತು 111/2003 ಶ್ರೀ ವಿಠಲ ಮತ್ತು ಇತರರು ಪ್ರಕರಣದಲ್ಲಿ ಸರ್ವೋಚ್ಛ ನ್ಯಾಯಾಲಯವು ದಿನಾಂಕ 6-5-2003 ರಂದು ನೀಡಿದ ತೀರ್ಪನ್ನು ಆಧರಿಸಿ ಕರ್ನಾಟಕ ಸರ್ಕಾರವು ದಿನಾಂಕ 28-8-2006 ರಂದು ಸುತ್ತೋಲೆ ಹೊರಡಿಸಿದೆ. ಅದರಲ್ಲಿಯೂ ಸಹ ಗ್ರಾಮೀಣ ಕೃಪಾಂಕವನ್ನು ಹೊರತುಪಡಿಸಿ ಆಯ್ಕೆಯಾದ ಅಭ್ಯರ್ಥಿಗಳನ್ನು ಸೇವೆಯಲ್ಲಿಯೇ ಮುಂದುವರೆಸಲು ಸೂಚಿಸಿದೆ. ಇವೆಲ್ಲವನ್ನು ಪರಿಗಣಿಸಿಯೇ ಕರ್ನಾಟಕ ಲೋಕ ಸೇವಾ ಆಯೋಗದವರು ಅನುಭಂದ-01 ರಿಂದ 07 ರಲ್ಲಿ ಅಭ್ಯರ್ಥಿಗಳ ಆಯ್ಕೆ ಪಟ್ಟಿ ಮಾಡಿರುತ್ತದೆ.

ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ E(2) 104: PSC:04-05 ದಿನಾಂಕ 8-10-2004 ರಲ್ಲಿ ಹಾವೇರಿ ಜಿಲ್ಲೆಯು ಹೊಸದಾಗಿ ಸೃಜನೆಗೊಂಡ ಗೊಂದಲದಿಂದ ಇವರನ್ನು ಅನುಭಂದ 02 ರಲ್ಲಿ ಸೇರಿಸಿ ಪ್ರ.ದ.ಸ ಹುದ್ದೆಗೆ ಹಂಚಿಕೆ ಮಾಡುವ ಬದಲಾಗಿ ಅನುಬಂಧ 04 ರಲ್ಲಿ (Non Tally) ಸೇರಿಸಿದ್ದರಿಂದ ಈ ಮೂವರು ಕರ್ನಾಟಕ ಲೋಕ ಸೇವಾ ಆಯೋಗ ಅಧಿಸೂಚನೆ ಸಂಖ್ಯೆ E(2) 103: 04-05:PSC ದಿನಾಂಕ 7-10-2004 ರ ಪ್ರಕಾರ ಇವರುಗಳನ್ನು ಹೊಸ ನೇಮಕಾತಿ ಅಭ್ಯರ್ಥಿಗಳೆಂದು ಪರಿಗಣಿಸಿ ಹಾವೇರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಘಟಕಕ್ಕೆ ಆಯ್ಕೆ ಮಾಡಲಾಗಿತ್ತು, ಆದರೆ ಕರ್ನಾಟಕ ಲೋಕ ಸೇವಾ ಆಯೋಗ ಪತ್ರ ಸಂಖ್ಯೆ 537/04-05 ದಿನಾಂಕ 12-1-2005 ರ ಪ್ರಕಾರ ಈ ಮೂವರು ಅಭ್ಯರ್ಥಿಗಳು ಗ್ರಾಮೀಣ ಕೃಪಾಂಕವನ್ನು ಹೊರತುಪಡಿಸಿದ ನಂತರ ಇದೇ ಇಲಾಖೆಯಲ್ಲಿಯೇ ಆಯ್ಕೆಗೊಂಡು ಸೇವೆಯಲ್ಲಿ ಮುಂದುವರಿದಿರುತ್ತಾರೆ ಎಂಬುದನ್ನು ಮನಗಂಡ ನೇಮಕಾತಿ ಪ್ರಾಧಿಕಾರವು (ಕೆ.ಪಿ.ಎಸ್.ಸಿ) ಅನುಬಂಧ 02 ರಲ್ಲಿ ಹಂಚಿಕೆ ಮಾಡಬೇಕಾದ ಈ ಅಭ್ಯರ್ಥಿಗಳನ್ನು ಅನುಭಂದ-04 ರಲ್ಲಿ ಸೇರಿಸಿರುವುದರನ್ನು ಬದಲಾವಣೆಗೊಳಿಸಿ ಅನುಭಂದ-2 ರಲ್ಲಿ ಸೇರಿಸಿ ಆದ ಪ್ರಮಾದವನ್ನು ಸರಿಪಡಿಸಿ ಪತ್ರ ಕಳುಹಿಸಿರುತ್ತಾರೆ. ಸದರಿ ಅನುಭಂದ-2 ರಲ್ಲಿಯ ಪ್ರಕಾರ "ಈ ಅಭ್ಯರ್ಥಿಗಳು ದಿನಾಂಕ

21-5-1999 ರ ಅಧಿಸೂಚನೆಯಂತೆ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡಕ್ಕೆ ಹಂಚಿಕೆಯಾಗಿದ್ದು ನಂತರ ಧಾರವಾಡ ಜಿಲ್ಲೆಯು ಈಗಿನ ವಿಭಜನೆ ಜಿಲ್ಲೆಯಾದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುದರಿಂದ ಈ 3 ಅಭ್ಯರ್ಥಿಗಳನ್ನು ಪರಿಷ್ಕೃತ ಆಯ್ಕೆ ಪಟ್ಟಿಯಂತೆ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾವೇರಿಗೆ ಹಂಚಿಕೆ ಮಾಡಿ ಅನುಭಂದ-4ರ ಬದಲಾಗಿ ಅನುಭಂದ-02 ರಲ್ಲಿ ಸೇರಿಸಿ ಇವರುಗಳು ಈ ಹಿಂದೆ ಹಾಜರಾದ ದಿನಾಂಕದಿಂದ ಹಿಂದಿನ ಸೇವಾ ಜೇಷ್ಠತೆ, ವೇತನ ನಿಗದೀಕರಣ ಇತ್ಯಾದಿಗಳನ್ನು ಈ ಹಿಂದೆ ಕರ್ತವ್ಯದ ಮೇಲೆ ಹಾಜರಾದ ದಿನಾಂಕದಿಂದಲೇ ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ನೇಮಕಾತಿ ಪ್ರಾಧಿಕಾರವಾದ ಕರ್ನಾಟಕ ಲೋಕ ಸೇವಾ ಆಯೋಗವು ಸ್ಪಷ್ಟೀಕರಣವನ್ನು ಸ್ಪಷ್ಟವಾಗಿ ನೀಡಿರುತ್ತದೆ''.

ಕಂಡಿಕೆ 5 ರ ತಮ್ಮ ಆಕ್ಷೇಪಣೆಯ ಪ್ರಕಾರ ಈ ಮೂವರು ಸಿಬ್ಬಂದಿಗಳ ಹೆಸರನ್ನು ಅನುಭಂದ-4 ರಲ್ಲಿ ಸೇರಿಸಬೇಕಾದರೆ ಇವರುಗಳು ಯಾವುದೇ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿರುವುದಿಲ್ಲ ಮತ್ತು ಇವರುಗಳು ಗ್ರಾಮೀಣ ಕೃಪಾಂಕ ಹೊರತು ಪಡಿಸಿದರೂ ಮೊದಲಿದ್ದ ನ್ಯಾಯಾಂಗ ಇಲಾಖೆಯಲ್ಲಿ ಇವರನ್ನು ಕರ್ನಾಟಕ ಲೋಕ ಸೇವಾ ಆಯೋಗವು ಹಂಚಿಕೆ ಮಾಡಿರುತ್ತದೆ.

ಕಂಡಿಕೆ 7 ರಲ್ಲಿ ಸಲ್ಲಿಸಿರುವಂತೆ ಈ 3 ಸಿಬ್ಬಂದಿಗಳನ್ನು ಅನುಭಂದ 02 ರಲ್ಲಿ ಸೇರಿಸಿರುವುದರಿಂದ ದಿನಾಂಕ 21-5-1999 ಅಧಿಸೂಚನೆಯಂತೆ ಆಯ್ಕೆಗೊಂಡ ಇವರುಗಳು ಹಿಂದಿನ ಸೇವಾ ಜೇಷ್ಠತೆ ಮುಂದುವರಿಯುವದರಿಂದ ಶ್ರೀ ಪಿ. ಎಂ. ಮೊಗವೀರ, ಶ್ರೀ ಎಂ. ಹೆಚ್. ಕಡಕೋಳ ಹಾಗೂ ಶ್ರೀ ಬಿ. ಶ್ರೀನಿವಾಸ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಆದೇಶ ಸಂಖ್ಯೆ 06/05 ದಿನಾಂಕ 17-01-2005 ರ ಪ್ರಕಾರ ಸೇವೆಯನ್ನು ಮುಂದುವರೆಸಿರುತ್ತಾರೆ. ಆದರೆ ತಾವು ಕರ್ನಾಟಕ ಲೋಕ ಸೇವಾ ಆಯೋಗ ಪತ್ರ E(2) 103/04-05/PSC ದಿನಾಂಕ 7-10-2004 ರ ಅಧಿಸೂಚನೆ ಪ್ರಕಾರ ಪ್ರ.ದ.ಸ ಹುದ್ದೆಗೆ ಆಯ್ಕೆ ಆಗಿರುವುದರಿಂದ ನಿಮ್ಮ ಜೇಷ್ಠತೆಯನ್ನು ನಿಯಮಾನುಸಾರ ಈ ಮೂವರಿಗಿಂತ ಕೆಳಸ್ತರದಲ್ಲಿ ಪರಿಗಣಿಸಲಾಗಿರುತ್ತದೆ.

ಆಕ್ಷೇಪಣೆಯ ಕಂಡಿಕೆ 6 ಪರಿಶೀಲಿಸಲಾಗಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ WP 26923/05 ದಿನಾಂಕ 30-8-2006 ಆದೇಶ ಹಾಗೂ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿ ಇವರ ಆದೇಶ ಸಂಖ್ಯೆ 168/2006 ದಿನಾಂಕ 15-11-2006 ರ ಪ್ರಕಾರ ಶ್ರೀ ಸುರೇಶ ಜಿ. ಪಕ್ಕೇದ ಹಾಗೂ ಶ್ರೀಮತಿ ಜೆ. ಎಸ್. ಹಂಚಿನಮನಿ ಇವರುಗಳನ್ನು ಶಿರಸ್ತೇದಾರರ ಹುದ್ದೆಗೆ ಪದೋನ್ನತಿ ನೀಡಲಾಗಿದೆ. ಆದ್ದರಿಂದ ಅವರು ನಿಮಗಿಂತ ಮೇಲುಸ್ತರದ ಸ್ಥಾನದಲ್ಲಿರುತ್ತಾರೆ.

ಸದರಿಯವರ ಆಕ್ಷೇಪಣೆಯ ಉಳಿದ ಕಂಡಿಕೆಗಳಲ್ಲಿ ಸಲ್ಲಿಸಿರುವ ತಕರಾರುಗಳಿಗೆ ಮೇಲ್ಕಾಣಿಸಿದ ಉತ್ತರವೇ ಆಗಿರುವುದರಿಂದ ಉಳಿದ ಕಂಡಿಕೆಯ ತಕರಾರುಗಳನ್ನು ಕಡತಕ್ಕೆ ಸೇರಿಸಲಾಗಿದೆ.

2. ಶ್ರೀ ಡಿ. ಎಂ. ರೋಣ, ಶಿರಸ್ತೇದಾರರು, ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಹಾನಗಲ್ಲ ಇವರ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿ ಇವರು ದಿನಾಂಕ 3-6-2013 ರಂದು ಪ್ರ.ದ.ಸ ಹುದ್ದೆಯಿಂದ ಶಿರಸ್ತೇದಾರ ಹುದ್ದೆಗೆ ಬಡ್ತಿ ಹೊಂದಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಈಗ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪಿಲ್ ಸಂಖ್ಯೆ 2368/2011 ದಿನಾಂಕ 9-2-2017 ರ ಪ್ರಕಾರ ಪರಿಷ್ಕೃತ ಜೇಷ್ಠತಾ ಪಟ್ಟಿಯ ಪ್ರಕಾರ ಶ್ರೀ ಎಂ. ಎನ್. ಶೇಜೆಕರ ದಿನಾಂಕ 31-1-2012 ರಂದು ನಿವೃತ್ತಿಯಾಗಿದ್ದು, ಆದ್ದರಿಂದ ಸದರಿಯವರ ಸಂಭಾವ್ಯ ಪದೋನ್ನತಿ ದಿನಾಂಕ 1-2-2012 ಕ್ಕೆ ನಿಗದಿಪಡಿಸಲಾಗಿದೆ. ಇದು ಕ್ರಮಬದ್ಧವಾಗಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಠ ಪಂಗಡ ನೌಕರರ ಮೀಸಲಾತಿ ರದ್ದುಪಡಿಸಿ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ತಯಾರಿಸಲು ನಿರ್ದೇಶಿಸಿರುತ್ತದೆ.

ಅದರಂತೆ ಇವರು ಪ್ರ.ದ.ಸ ಹುದ್ದೆಯಲ್ಲಿ ಶ್ರೀ ಎಸ್. ಎಂ. ಬೇನಾಳ, ಶ್ರೀ ಎಂ. ಡಿ. ಕನವಳ್ಳಿ, ಶ್ರೀ ಎ. ಆರ್. ಜೋಗಣ್ಣವರ ಇವರುಗಳ ಮೀಸಲಾತಿ ರದ್ದು ಪಡಿಸಿ ಪರಿಷ್ಕೃತ ಜೇಷ್ಠತಾ ಪಟ್ಟಿ ಸಿದ್ದಪಡಿಸಿದಾಗ ಸದರಿ ಸಿಬ್ಬಂದಿಯ ಪರಿಷ್ಕೃತ ಜೇಷ್ಠತೆಯು 101 ರಿಂದ 98 ಕ್ಕೆ ಮೇಲಸ್ತರವಾಗಿರುತ್ತದೆ. ಕಾಲಾನುಸಾರ ಪ್ರಕಟಿಸಿದ ಹಿಂದಿನ ಜೇಷ್ಠತಾ ಪಟ್ಟಿಯ ಪ್ರ.ದ.ಸ ಹುದ್ದೆಯ ಕ್ರಮ ಸಂಖ್ಯೆ 98 ಮತ್ತು 101 ರ ನೌಕರರು ಜಿಲ್ಲಾ ಮತ್ತು ಸತ್ರ

ನ್ಯಾಯಾಲಯ, ಹಾವೇರಿ ಆದೇಶ ಸಂಖ್ಯೆ 57/2010 ದಿನಾಂಕ 17-6-2010 ರಂದು ಏಕಕಾಲಕ್ಕೆ ಪದೋನ್ನತಿ ಹೊಂದಿದ್ದು, ಅವರ ಸಂಭಾವ್ಯ ಪದೋನ್ನತಿ ದಿನಾಂಕಗಳು ಸರಿಸುಮಾರು ಒಂದೇ ಆಗಿರುತ್ತದೆ. ಆದರೆ ಪ್ರ.ದ.ಸ ಹುದ್ದೆಯ ಸಂಭಾವ್ಯ ಪದೋನ್ನತಿ ದಿನಾಂಕ ನಿಗದಿಪಡಿಸುವ ಬಗ್ಗೆ ಸದರಿ ಸಿಬ್ಬಂದಿಯು ದಿನಾಂಕ 1-1-2011ಕ್ಕೆ ಯಾವುದೇ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ, ಆದ್ದರಿಂದ ಜೇಷ್ಠತಾ ಪಟ್ಟಿಯಲ್ಲಿನ ಪ್ರ.ದ.ಸ ಮತ್ತು ಶಿರಸ್ತೇದಾರ ಹುದ್ದೆಯ ಸಂಭಾವ್ಯ ಪದೋನ್ನತಿ ದಿನಾಂಕಗಳು ಕ್ರಮಬದ್ಧವಾಗಿರುತ್ತದೆ. ಆದ್ದರಿಂದ ಸದರಿ ಸಿಬ್ಬಂದಿಯು ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಗಣಿಸಿರುವುದಿಲ್ಲ ಮತ್ತು ಸದರಿಯವರು ಅಂದಾಜು ಸನ್ 2004ರಲ್ಲಿ ಪ್ರ.ದ.ಸ. ಹುದ್ದೆಗೆ ಹಾಗೂ ಸನ್ 2007ರಲ್ಲಿ ಶಿರಸ್ತೇದಾರರ ಹುದ್ದೆಗೆ ಪದೋನ್ನತಿಯನ್ನು ಪರಿಗಣಿಸುವ ಬಗ್ಗೆ ಯಾವುದೇ ಪೂರಕ ದಾಖಲಾತಿಗಳನ್ನು ಪೂರೈಸಿರುವುದಿಲ್ಲ.

ಸದರಿಯವರ ಆಕ್ಷೇಪಣೆಯ ಉಳಿದ ಕಂಡಿಕೆಗಳಲ್ಲಿ ಸಲ್ಲಿಸಿರುವ ತಕರಾರುಗಳಿಗೆ ಮೇಲ್ಕಾಣಿಸಿದ ಉತ್ತರವೇ ಆಗಿರುವುದರಿಂದ ಉಳಿದ ಕಂಡಿಕೆಯ ತಕರಾರುಗಳನ್ನು ಕಡತಕ್ಕೆ ಸೇರಿಸಲಾಗಿದೆ.

3. ಶ್ರೀಮತಿ ಎಸ್. ಹೆಚ್. ತಮ್ಮಣ್ಣನವರ, ಪ್ರ.ದ.ಸ, ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ, ಹಾವೇರಿ ಇವರು ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಶೀಲಿಸಲಾಯಿತು. ಸದರಿಯವರು ಕೋರಿದ ತಕರಾರಿನಂತೆ 9ನೇ ಬ್ಲಾಕ್ ಕಾಲಂನಲ್ಲಿ ಕ್ರಮ ಸಂಖ್ಯೆ 117 ರಿಂದ 122 ರವರೆಗೆ ಬಡ್ತಿಗೆ ಮೀಸಲಿಟ್ಟ ಹುದ್ದೆಗಳಾಗಿರುತ್ತವೆ. 123 ಮತ್ತು 124 ಇವು ನೇರ ನೇಮಕಾತಿಗೆ ಮೀಸಲಿಟ್ಟ ಹುದ್ದೆಗಳಾಗಿರುತ್ತವೆ. ಆದರೆ ಸದರಿಯವರು ಅಂತರ ಜಿಲ್ಲಾ ವರ್ಗಾವಣೆ ಹೊಂದಿ ಈ ಘಟಕಕ್ಕೆ ಬಂದಿರುವುದರಿಂದ ಅವರನ್ನು ನೇರ ನೇಮಕಾತಿಗೆ ಮೀಸಲಿಟ್ಟ ಹುದ್ದೆಯಲ್ಲಿಯೇ ತಮ್ಮ ಜೇಷ್ಠತೆಯನ್ನು ನಿಗದಿ ಪಡಿಸಬೇಕಾಗುತ್ತದೆ. ಆದ್ದರಿಂದ ಜೇಷ್ಠತಾ ಪಟ್ಟಿಯಲ್ಲಿ ಸದರಿಯವರ ಕ್ರಮ ಸಂಖ್ಯೆಯು ಕ್ರಮಬದ್ದವಾಗಿರುತ್ತದೆ. ಆದ್ದರಿಂದ ಸದರಿಯವರು ಸಲ್ಲಿಸಿದ ತಕರಾರನ್ನು ಕಡತಕ್ಕೆ ಸೇರಿಸಲಾಗಿದೆ.

4. ಶ್ರೀ ಎಸ್. ಮಂಜುನಾಥ, ಪ್ರ.ದ.ಸ. ಇವರು ಪರಿಶಿಷ್ಟ ಪಂಗಡ ಜಾತಿಯೆಂದು ನಮೂದಿಸಲು ಆಕ್ಷೇಪಣೆ ಸಲ್ಲಿಸಿರುತ್ತಾರೆ. ಸದರಿಯವರ ಆಕ್ಷೇಪಣೆಯ ಪ್ರಕಾರ ಜೇಷ್ಠತಾ ಪಟ್ಟಿಯಲ್ಲಿ ಜಾತಿಯನ್ನು ನಮೂದಿಸಲಾಗಿದೆ.
5. ಶ್ರೀ ಜಿ. ಎನ್. ಯಲಗಚ್ಚಿನ, ದ್ವಿ.ದ.ಸ., ಶ್ರೀಮತಿ ಸವಿತಾ ವಿ ಬಡಿಗೇರ, ದ್ವಿ.ದ.ಸ., ಶ್ರೀ ಜಿ.ಎಸ್.ಸಾವಳಗಿಮಠ, ದ್ವಿ.ದ.ಸ., ಶ್ರೀ ಕೆ.ಎನ್.ರಾಮಪ್ರಸಾದ, ದ್ವಿ.ದ.ಸ., ಶ್ರೀ ಎ.ಎಸ್. ಹೊಂಗಲ್, ದ್ವಿ.ದ.ಸ., ಶ್ರೀ ಬಿ.ಎಸ್.ಹುಲ್ಮನಿ, ದ್ವಿ.ದ.ಸ., ಶ್ರೀ ವಿ. ಎಂ. ನಿರಂಜನಮೂರ್ತಿ, ದ್ವಿ.ದ.ಸ., ಶ್ರೀ ಎಸ್.ಎಮ್.ತಿಗಡಿ, ದ್ವಿ.ದ.ಸ., ಶ್ರೀಮತಿ ವಿ. ಎಸ್. ಯಡೆಹಳ್ಳಿ, ದ್ವಿ.ದ.ಸ., ಶ್ರೀ ಆರ್.ಎಂ.ಬದ್ವಿ, ದ್ವಿ.ದ.ಸ., ಶ್ರೀ ಟಿ.ಎಫ್. ಕೊರವರ, ಬೆಲೀಫ್, ಶ್ರೀ ಡಿ.ಎಸ್.ಪ್ರವೀಣಕುಮಾರ, ಜಾರಿಕಾರ ಇವರುಗಳು ಸೇವಾ ಜೇಷ್ಠತೆಯನ್ನು ನಿರ್ಧರಿಸುವಾಗ ನೇರನೇಮಕಾತಿ (DR) ಮತ್ತು ಪದೋನ್ನತಿ ನೇಮಕಾತಿ (PR) ಕೋಟಾ ನಿಯಮದನ್ವಯ ವಿಭಾಗಿಸಿ ತಯಾರಿಸಲು ಆಕ್ಷೇಪಣೆ ಸಲ್ಲಿಸಿರುತ್ತಾರೆ. ಆದರೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಪ್ರಕಾರ ದಿನಾಂಕ 27-4-1978 ರಿಂದ 11-10-2001 ರವರೆಗೆ ಅಖಂಡ ಧಾರವಾಡ ಜಿಲ್ಲೆಯನ್ನು (DR) ಮತ್ತು (PR) ಅಂತಾ ವಿಭಾಗಿಸಿ ಜೇಷ್ಠತಾ ಪಟ್ಟಿಯನ್ನು ತಯಾರಿಸಬೇಕಾಗಿತ್ತು, ಆದರೆ ಧಾರವಾಡ ಜಿಲ್ಲೆಯಿಂದ ಈ ರೀತಿ ವಿಭಾಗಿಸಿ ಸೇವಾ ಜೇಷ್ಠತಾ ಪಟ್ಟಿಯನ್ನು ತಯಾರಿಸಿರುವುದಿಲ್ಲ, ಆ ಜಿಲ್ಲೆಯಿಂದ (DR) ಮತ್ತು (PR) ಅಂತಾ ವಿಭಾಗಿಸಿ ತಯಾರಿಸಿದ್ದರೆ. ಅದರ ಮುಂದುವರಿದ ಭಾಗವಾಗಿ ಅಂದರೆ ದಿನಾಂಕ 12-10-2001 ರಿಂದ ಇಲ್ಲಿಯವರೆಗೆ ಜೇಷ್ಠತಾ ಪಟ್ಟಿಯನ್ನು ತಯಾರಿಸಬಹುದಾಗಿತ್ತು, ಅಲ್ಲದೇ ಸದರಿ ಹಾವೇರಿ ಜಿಲ್ಲಾ ಘಟಕದಿಂದ ಇದರ ಬಗ್ಗೆ ಅಂದರೆ ಸನ್ 2010 ರಲ್ಲಿ ಪದೋನ್ನತಿ ಹೊಂದಿದ ಈ ಸಿಬ್ಬಂದಿಗಳು ಹಾಗೂ ಇದಕ್ಕಿಂತ ಪೂರ್ವದಲ್ಲಿನ ಯಾವುದೇ ಸಿಬ್ಬಂದಿಗಳು ದಿನಾಂಕ 12-10-2001 ರಿಂದ ಸನ್ 2014 ರವರೆಗೆ ಇದರ ಬಗ್ಗೆ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ, ಆದ್ದರಿಂದ ಸದರಿಯವರು ಸಲ್ಲಿಸಿದ ಆಕ್ಷೇಪಣೆಗಳು ಪರಿಗಣಿಸಲಾಗಿರುವುದಿಲ್ಲ.

ಈ ನ್ಯಾಯಾಲಯದಲ್ಲಿ ಸ್ವೀಕರಿಸಿದ ಆಕ್ಷೇಪಣೆಗಳಿಗೆ ಮೇಲಿನಂತೆ ಉತ್ತರ ನೀಡಲಾಗಿದ್ದು, ಅದರಂತೆ ಕೆಲವು ಮುದ್ರಣ ದೋಷಗಳನ್ನು ಸರಿಪಡಿಸಿದ್ದು, ಈಗ ದಿನಾಂಕ 12-10-2001 ರಿಂದ 30-9-

2017 ರವರೆಗೆ ಶಿರಸ್ತೇದಾರ, ಶೀಘ್ರಲಿಪಿಗಾರರು, ಪ್ರ.ದ.ಸ., ದ್ವಿ.ದ.ಸ, ಬೆರಳಚ್ಚುಗಾರರು, ಬೆರಳಚ್ಚು-ನಕಲುಗಾರರು, ಬೆಲೀಫ, ವಾಹನ ಚಾಲಕರು, ಜಾರಿಕಾರರು, ಅಟೆಂಡರ್ ಹಾಗೂ ಸಿಪಾಯಿ ಇವರ ಪರಿಷ್ಕೃತ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲಾಗಿದೆ

ಉಲ್ಲೇಖ-7 ರ ನಿರ್ದೇಶನದ ಪ್ರಕಾರ ಅಂತಿಮ ಪರಿಷ್ಕೃತ ಸೇವಾ ಜೇಷ್ಠತಾ ಪಟ್ಟಿಯನ್ನು ಜಿಲ್ಲಾ ನ್ಯಾಯಾಲಯದ ಅಂತರ್ಜಾಲದಲ್ಲಿ http://ecourts.gov.in/haveri ನಲ್ಲಿ ಪ್ರಕಟಿಸಬೇಕು. ಎಲ್ಲಾ ಅಧೀನ ನ್ಯಾಯಾಲಯಗಳಿಗೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೆ ಅಂತಿಮ ಪರಿಷ್ಕೃತ ಸೇವಾ ಜೇಷ್ಠತಾ ಪಟ್ಟಿಯನ್ನು ಕಳುಹಿಸಿ ಎಲ್ಲಾ ಸಿಬ್ಬಂದಿಗಳ ರುಜು ಪಡೆದುಕೊಳ್ಳಬೇಕು.

**ಸಹಿ/-**

**(ಈಶಪ್ಪಾ ಕೆ. ಭೂತೆ)**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ

**ಪ್ರತಿಯನ್ನು**

೧. ೨ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಣೇಬೆನ್ನೂರ.
೨. ಹಿರಿಯ ದಿವಾಣಿ ನ್ಯಾಯಾಲಯ, ಹಾವೇರಿ/ರಾಣೇಬೆನ್ನೂರ/ಹಾನಗಲ್ಲ/ಹಿರೇಕೆರೂರ/ಬ್ಯಾಡಗಿ.
೩. ದಿವಾಣಿ ನ್ಯಾಯಾಲಯ, ಹಾವೇರಿ/ರಾಣೇಬೆನೂರ/ಹಾನಗಲ್ಲ/ಹಿರೇಕೆರೂರ/ಬ್ಯಾಡಗಿ/ಶಿಗ್ಗಾಂವ/ಸವಣೂರ.

ದಿನಾಂಕ 12-10-2001 ರಿಂದ 30-09-2017ರವರೆಗೆ ಹಾವೇರಿ ಜಿಲ್ಲಾ ನ್ಯಾಯಾಂಗ ಘಟಕದಲ್ಲಿ ಕಾರ್ಯನಿರ್ವಹಿಸಿದ ಮತ್ತು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಅಂತಿಮ ಪರಿಷ್ಕೃತ ಸೇವಾ ಜೇಷ್ಠತಾ ಪಟ್ಟಿಯ ಸ್ವೀಕೃತಿ ಯಾದಿ

ನ್ಯಾಯಾಲಯದ ಹೆಸರುಃ………………………………………

| ಕ್ರ.ಸಂ | ನೌಕರರ ಹೆಸರು | ಹುದ್ದೆ | ಸಹಿ |
|---|---|---|---|
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |

ಪೀಠಾಸೀನಾಧಿಕಾರಿಗಳ ಸಹಿ